ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಇದೇ ಯೋಜನೆಯಲ್ಲಿ ನೀವು ತೆಗೆದುಕೊಳ್ಳಬೇಕು. ಕೆರೆಗಟ್ಟೆಗಳನ್ನು ಇನ್ನಾರು ಮಾಡಬೇಕು. ಬರಗಾಲದಲ್ಲಿ ಹಣ ಬಿಡುಗಡೆ ಮಾಡಿರುವಂಥದ್ದೇ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುವುದಕ್ಕೋಸ್ಕರ ಈ ತರಹ ಕೆಲಸ ತೆಗೆದುಕೊಳ್ಳಬೇಕು. ಅದು ಆಗುತ್ತಾ ಇಲ್ಲ, ಜಿಲ್ಲಾಧಿಕಾರಿಗಳಿಗೆ ಈಗ ಏನು ಹಣ ಬಿಡುಗಡೆ ಮಾಡಬೇಕು ಎಂದು ಹೇಳುತ್ತೀರಿ ಅದನ್ನು ಬಿಡುಗಡೆ ಮಾಡಿದ್ದೀರೋ? ಮಾರ್ಚ್ ತಿಂಗಳು ಒಳಗಾಗಿ ಸೂಕ್ತವಾಗಿರುವ ಕೆಲಸಗಳಿಗೆ ಖರ್ಚು ಮಾಡುವಂತಹದ್ದಕ್ಕಾದರೂ ಇವತ್ತು ಅದೇಶ ಕೊಡುತ್ತೀರಾ ಸ್ವಾಮಿ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮೊದಲು ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ಈ ಉಳಿದ ಹಣದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಿ ಎಂದು ನಾನು ಸೂಚನೆಗಳನ್ನು ಕೊಡುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ನ್ಯಾಚುರಲ್ ಕಲಾಮಿಟಿ ಫಂಡ್ ಸುಮಾರು 39ಕೋಟಿ ರೂಪಾಯಿ 10ನೇ ಫೈನಾನ್ಸ್ ಕಮೀಷನ್‌ನಲ್ಲಿ ಫಿಕ್ಸ್ ಆಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದರಲ್ಲಿ ಈಗಾಗಲೇ 34 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಇನ್ನೂ ಐದು ಕೋಟಿ ರೂಪಾಯಿ ಅವರ ಹತ್ತಿರ ಇದೆ ಎಂದು ಹೇಳಿದ್ದಾರೆ. ಆದರೆ ಈ ನ್ಯಾಚುರಲ್ ಕಲಾಮಿಟಿಯಲ್ಲಿ ಒಡೆದ ಸುಮಾರು 10-12 ಕೆರೆಗಳ ಬಗ್ಗೆ ಎಸ್ಟಿಮೇಟ್ಸ್ ಮಾಡಿಸಿ ಜಿಲ್ಲಾಧಿಕಾರಿಗಳಿಗೆ ಕೊಟ್ಟ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಇಲ್ಲವೆಂದರೆ ಮಳೆಗಾಲದಲ್ಲಿ ಮಳೆ ಬಂದರೆ ಆ 12 ಹಳ್ಳಿಗಳಿಗೆ ರೈತರಿಗೆ ತೊಂದರೆ ಆಗುತ್ತದೆ. ಎಂದು ಮನವಿ ಕೊಟ್ಟರೂ ಕೂಡ ಇಲ್ಲಿಯವರೆಗೆ ಆ ಜಿಲ್ಲಾಧಿಕಾರಿಗಳು ಹೋಗಿ ನೋಡಿಕೊಂಡು ಎಸ್ಟಿಮೇಟ್ ಸಬ್ಮಿಟ್ ಮಾಡಿಲ್ಲ, ನಾನು ಅನೇಕ ಸಾರಿ ರೆವಿನ್ಯೂ ಇಲಾಖೆಯ ಕಾರ್ಯದರ್ಶಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದಾಗ ಅಲ್ಲಿಂದ ಡಿಟೇಲ್ಸ್ ಕಳಿಸುತ್ತಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ತಮಗೂ ಕೂಡ ಒಂದಲ್ಲ, ಎರಡೂ ಮೂರು ಲೆಟರ್ ಬರೆದಿದ್ದೇನೆ. ಹೀಗೆ ಅನೇಕ ಸಾರಿ ನಾವು ಪದೇ ಪದೇ ಹೇಳತಕ್ಕ ಪ್ರಸಂಗ ಬರುತ್ತಿದೆ. ದಯವಿಟ್ಟು ಅಲ್ಲಿ ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್ ಆಗಲೀ ಅಥವಾ ಡಪ್ಯೂಟಿ ಕಮೀಷನರ್ ಆಗಲೀ ಯಾವುದೇ ನ್ಯಾಚುರಲ್ ಕಲಾಮಿಟಿಯಲ್ಲಿ ಒಡೆದು ಹೋದಂತಹ ಕೆರೆಗಳ ದುರಸ್ತಿಯನ್ನು ತಕ್ಷಣ ತೆಗೆದುಕೊಳ್ಳಬೇಕು. ಏಕೆಂದರೆ ಅದು ರೈತರಿಗೆ ನೇರವಾಗಿ ಸಂಬಂಧಪಟ್ಟಂಥಾದ್ದು. ಒಂದು ರಸ್ತೆ ದುರಸ್ತಿ ಮಾಡುವ ಕೆಲಸವನ್ನು ನಿಲ್ಲಿಸಬಹುದು, ಆದರೆ ಒಂದು ಕೆರೆ ದುರಸ್ತಿ ಕೆಲಸ ತಕ್ಷಣ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ನಾನು ಅನೇಕ ಸಾರಿ ಹೇಳಿದರೂ ಕೂಡ ಈ ಒಂದು ನ್ಯಾಚುರಲ್ ಕಲಾಮಿಟಿ ಫಂಡ್‌ನಲ್ಲಿ ತೆಗೆದುಕೊಳ್ಳಿ ಎಂದು ಹೇಳಿದರೂ ಕೂಡ ಇನ್ನೂವರೆಗೆ ಅದು ಪೂರ್ತಿ ಆಗುತ್ತಾ ಇಲ್ಲ. ಆದ್ದರಿಂದ ದಯವಿಟ್ಟು ಅಟ್‌ಲೀಸ್ಟ್ ಮೂರು ಕೋಟಿ ರೂಪಾಯಿ ಎಂದು ಹೇಳುತ್ತಿದ್ದೀರಿ, ಆ ರಿಪೋರ್ಟ್ ತರಿಸಿ ಕೊಂಡು ಇದರ ಬಗ್ಗೆ ಏನಾದಾರೂ ಕ್ರಮ ಹಾಕಿಕೊಳ್ಳುತ್ತೀರೋ ಹೇಗೆ ಎಂದು ಕೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನಾನು ಈ ದಿವಸ ಅಥವಾ ಸೋಮವಾರ ಜಿಲ್ಲಾಧಿಕಾರಿಗಳನ್ನು ನೇರವಾಗಿ ಸಂಪರ್ಕ ಮಾಡಿ ಅಲ್ಲಿನ ಪರಿಸ್ಥಿತಿಯನ್ನು ತಿಳಿದು ಕೊಂಡು ಏನು ಮಾಡುವುದಕ್ಕೆ ಸಾಧ್ಯ ಇದೆ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಉಡುಪಿ ತಾಲ್ಲೂಕಿನಲ್ಲಿ ಸರಕಾರಿ ಜಮೀನಿನ ಕ್ರಮೇಣ

455 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಕೆಳಕ್ಕಳಬೆಟ್ಟು ಉದ್ಯಾವರ ಹಾಗೂ ಪುತ್ತೂರಿನಲ್ಲಿ ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ ಸರ್ಕಾರಿ ಜಮೀನಿನ ಅಕ್ರಮಣವನ್ನು ತೆಗೆಯಲಾಗುವುದೆಂದು ಸರ್ಕಾರದವರು ಆಶ್ವಾಸನೆ ನೀಡಿರುವುದು ನಿಜವೇ

ಆ) ಹಾಗಿದ್ದರೆ, ಈ ಬಗ್ಗೆ ಕ್ರಮ ಕೈಗೊಳ್ಳಲು ನಿಧಾನ ನೀತಿ ಅನುಸರಿಸುವುದಕ್ಕೆ ಕಾರಣಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು

ಆ) ಈ ಪ್ರಕರಣಗಳಲ್ಲಿ ಕಾನೂನಿನ್ವಯ ಕ್ರಮ ಜರುಗಿಸಲಾಗುತ್ತಿದ್ದು, ವಿಳಂಬ ನೀತಿಯನ್ನು ಅನುಸರಿಸಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ, ರಸ್ತೆ ಬದಿಯಲ್ಲಿ ರೋಡ್ ಮಾರ್ಜಿನ್‌ಗಳು ಏನು ಇವೆ ಅಲ್ಲಿ ಸಾಕಷ್ಟು ರೀತಿಯ ಅಕ್ರಮಗಳು ನಡೆದಿವೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅದರ ಅಕ್ರಮಣ ತೆಗೆಯುವರು ಕಂದಾಯ ಅಧಿಕಾರಿಗಳೋ ಅಥವಾ ಸಂಬಂಧಪಟ್ಟ ಇಲಾಖಾಧಿಕಾರಿಗಳೋ ಏನೋ ಎನ್ನುವ ಬಗ್ಗೆ ಜಿಜ್ಞಾಸೆ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ನನಗೆ ಸ್ಪಷ್ಟವಾದ ಒಂದು ಮಾಹಿತಿ ಬೇಕಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಸೆಂಟರ್‌ನಿಂದ ಸ್ಟಡಿ ಎಂದು ಮಾರ್ಜಿನ್ ಇದೆ. ಅಷ್ಟರೊಳಗೆ ಬರುವುದನ್ನೆಲ್ಲಾ ರಾಷ್ಟ್ರೀಯ ಹೆದ್ದಾರಿಯವರು ತೆಗೆಸಬೇಕು.

ಶ್ರೀ ಯು.ಆರ್. ಸಭಾಪತಿ : ಅವರಲ್ಲಿ ಕೇಳಿದಾಗ ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅದನ್ನು ಕಂದಾಯ ಇಲಾಖೆಯವರೇ ಮಾಡಬೇಕು, ನಮ್ಮಿಂದ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ತಾವು ಸೂಕ್ತವಾದ ನಿರ್ದೇಶನವನ್ನು ಸಂಬಂಧಪಟ್ಟ ಇಲಾಖೆಯವರಿಗೆ ಕಳಿಸುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ : ತಿಳಿಸುತ್ತೇವೆ. ನಮ್ಮದೇ ಒಂದು ಕಾಲೇಜಿನ ಎದುರುಗಡೆ ಅನ್‌ಅಥರೈಸ್ಡ್ ಕನಸ್ಟ್ರಕ್ಷನ್ಸ್ ರಸ್ತೆಯ ಪಕ್ಕದಲ್ಲಿ ಬಂದಾಗ ನಾನು ಅವರಿಗೆ ಹೇಳಿ ರಿಮೂವ್ ಮಾಡಿಸಿ ಎಂದು ನಾವು ರಿಮೂವ್ ಮಾಡಿಸುವುದಕ್ಕೆ ಹೋಗಲಿಲ್ಲ. ಬೇಕಾದರೆ ಇನ್ನೊಂದು ಸಾರಿ ಅವರ ಹತ್ತಿರ ಮಾತನಾಡುತ್ತೇವೆ. ನಮ್ಮ ಕರ್ತವ್ಯ ಇದ್ದರೆ ನಾವು ಮಾಡುತ್ತೇವೆ. ಅವರ ಕರ್ತವ್ಯ ಇದ್ದರೆ ಅವರು ಕೆಲಸ ಮಾಡಬೇಕು.

ರಾಜ್ಯದಲ್ಲಿ ಸಾವಯವ ಗೊಬ್ಬರದ ಉಪಯೋಗ

469 - ಶ್ರೀ ಬಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಾವಯವ ಗೊಬ್ಬರ ಉಪಯೋಗವನ್ನು ಎಷ್ಟು ಜನ ರೈತರು ಮಾಡುತ್ತಿರುವರು.

ಆ) ಈ ಬಗ್ಗೆ ಸಮಗ್ರ ಪ್ರಚಾರಾಂದೋಳನ ಮಾಡಲು ಸರ್ಕಾರ ಜರುಗಿಸಿರುವ ಕ್ರಮಗಳೇನು ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಸಾವಯವ ಗೊಬ್ಬರದ ಉಪಯೋಗವನ್ನು ಮಾಡುವ ರೈತರ ಬಗ್ಗೆ ಸ್ಪಷ್ಟ ಅಂಕಿ ಅಂಶ ನೀಡಲು ಸಾಧ್ಯವಾಗದಿದ್ದರೂ ಇದು ದಿನದಿಂದ ದಿನಕ್ಕೆ ಸಾಕಷ್ಟು ಹೆಚ್ಚುತ್ತಿದೆ.